# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 760 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21–02–2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಂಗಳೂರಿನಿಂದ ತುಮಕೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಯಾವುದು; ಅದು ಎಷ್ಟು ಕಿ.ಮೀ. ಇದೆ ಏಕಪಥ ರಸ್ತೆಯಿಂದ ಯಾವಾಗ ಚತುಷ್ಪಥ ರಸ್ತೆಯನ್ನಾಗಿ ನಿರ್ಮಿಸಲಾಯಿತು; | ಬೆಂಗಳೂರಿನಿಂದ ತುಮಕೂರು ಸಂಪರ್ಕಿಸುವ ರಸ್ತೆಯು ರಾಷ್ಟ್ರೀಯ ಹೆದ್ದಾರಿ 48 (ಹಳೆ ರಾಹೆ.4) ಆಗಿದ್ದು, ಕಿ.ಮೀ. 10.00 ರಿಂದ ಕಿ.ಮೀ.74.168 ವರೆವಿಗೆ (ಒಟ್ಟು 64.168 ಕಿ.ಮೀ ಉದ್ದ) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧೀನದಲ್ಲಿದ್ದು, ಸದರಿ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ದಿಪಡಿಸಲಾಗಿರುವ ಕುರಿತು ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>**1) ಬೆಂಗಳೂರು–ನೆಲಮಂಗಲ ಭಾಗ – ಕಿ.ಮೀ.10.00 ರಿಂದ 29.500 (ಒಟ್ಟು ಉದ್ದ 19.50 ಕಿ.ಮೀ.)**<br>• ಯೋಜನೆಯ ಪ್ರಾರಂಭದ ದಿನಾಂಕ: 05.11.2007<br>• ತಾತ್ಕಾಲಿಕ ವಾಣಿಜ್ಯ ಕಾರ್ಯಾಚರಣೆಗೆ ಮುಕ್ತಗೊಳಿಸಿದ (PCOD) ದಿನಾಂಕ:10.12.2010.<br>**2) ನೆಲಮಂಗಲ–ತುಮಕೂರು ಭಾಗ – ಕಿ.ಮೀ. 29.500 ರಿಂದ 74.168 ಕಿ.ಮೀ. (ಒಟ್ಟು ಉದ್ದ 44.668 ಕಿ.ಮೀ.)**<br>• ಯೋಜನೆಯ ಪ್ರಾರಂಭದ ದಿನಾಂಕ: 23.06.2002<br>• ತಾತ್ಕಾಲಿಕ ವಾಣಿಜ್ಯ ಕಾರ್ಯಾಚರಣೆಗೆ ಮುಕ್ತಗೊಳಿಸಿದ (PCOD) ದಿನಾಂಕ: 10.02.2004. |
| ಆ) | ಈ ಹೆದ್ದಾರಿಯನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ; ವಿವರವಾದ ಮಾಹಿತಿ ನೀಡುವುದು; | 1) ಬೆಂಗಳೂರು–ನೆಲಮಂಗಲ ಭಾಗ ಕಿ.ಮೀ.10.00 ರಿಂದ 29.500 ರವರೆಗಿನ ಒಟ್ಟು ಉದ್ದ 19.50 ಕಿ.ಮೀ. ಉದ್ದದ ರಸ್ತೆ ಭಾಗವನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ದಿಪಡಿಸಿ ನಿರ್ವಹಿಸಲು ಮೆ: M/s Navayuga, Bangalore Toll Ways Pvt.Ltd. ರವರಿಗೆ ಅವಾರ್ಡ್ ನೀಡಲಾಗಿದ್ದು, ದಿನಾಂಕ: 09.05.2007 ರಂದು ಕರಾರು ಒಪ್ಪಂದ ಮಾಡಲಾಗಿರುತ್ತದೆ. ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027 ವರೆಗೆ ಇರುತ್ತದೆ. ಆದರೆ ರಿಯಾಯಿತಿದಾರರು ಕರಾರಿನನ್ವಯ ಹೆದ್ದಾರಿ ನಿರ್ವಹಣೆ ಮಾಡದ ಕಾರಣ ರಿಯಾಯಿತಿ ಗುತ್ತಿಗೆ ಕರಾರನ್ನು ದಿನಾಂಕ: 21.02.2021 ರಂದು ರದ್ದುಗೊಳಿಸಿ Clause 2 (b) of G.S.R.725(E) ಗೆಜೆಟ್ ನೋಟಿಫಿಕೇಷನ್ ದಿನಾಂಕ: 06.10.2023 ರನ್ವಯ ಸುಪರ್ಧಿಗೆ ಪಡೆಯಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು |

| | | |
|---|---|---|
| | | ವರದಿಸಿರುತ್ತಾರೆ.<br>• ಯೋಜನೆಯ ಪ್ರಾರಂಭದ ದಿನಾಂಕ: 05.11.2007<br>• ತಾತ್ಕಾಲಿಕ ವಾಣಿಜ್ಯ ಕಾರ್ಯಾಚರಣೆಗೆ ಮುಕ್ತಗೊಳಿಸಿದ (PCOD) ದಿನಾಂಕ: 10.12.2010.<br>• ನಿರ್ವಹಣಾ ಅವಧಿ ಕರಾರು ದಿನಾಂಕ: 04.11.2027ಕ್ಕೆ ಮುಕ್ತಾಯಗೊಳ್ಳುತ್ತದೆ.<br><br>2) ನೆಲಮಂಗಲ–ತುಮಕೂರು ಭಾಗ –ಕಿ.ಮೀ. 29.500 ರಿಂದ 61.450 ಕಿ.ಮೀ. ವರೆಗಿನ ಒಟ್ಟು ಉದ್ದ 44.668 ಕಿ.ಮೀ. ಉದ್ದದ ರಸ್ತೆ ಭಾಗವನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಿ ನಿರ್ವಹಿಸಲು M/s JAS Tollway Pvt. Ltd., ರವರಿಗೆ ಅವಾರ್ಡ್ ನೀಡಲಾಗಿದ್ದು, ದಿನಾಂಕ: 09.02.2004 ರಂದು ಕರಾರು ಒಪ್ಪಂದ ಮಾಡಲಾಗಿರುತ್ತದೆ. ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2022 ವರೆಗೆ ಇರುತ್ತದೆ. ಆದರೆ ರಿಯಾಯಿತಿದಾರರು ಕರಾರಿನನ್ವಯ ಹೆದ್ದಾರಿ ನಿರ್ವಹಣೆ ಮಾಡದ ಕಾರಣ ದಿನಾಂಕ: 07.11.2022 ರಂದು ಸುಪರ್ಧಿಗೆ ಪಡೆಯಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.<br>• ಯೋಜನೆಯ ಪ್ರಾರಂಭದ ದಿನಾಂಕ: 23.06.2002<br>• ತಾತ್ಕಾಲಿಕ ವಾಣಿಜ್ಯ ಕಾರ್ಯಾಚರಣೆಗೆ ಮುಕ್ತಗೊಳಿಸಿದ (PCOD) ದಿನಾಂಕ: 10.02.2004.<br>• ನಿರ್ವಹಣಾ ಅವಧಿ ಕರಾರು ದಿನಾಂಕ: 06.11.2022ಕ್ಕೆ ಮುಕ್ತಾಯವಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಪ್ರಾಧಿಕಾರ ದವರು ವರದಿಸಿರುತ್ತಾರೆ. |
| ಇ) | ಸದರಿ ರಸ್ತೆಯ ನಿರ್ವಹಣೆ ಸಂಸ್ಥೆಯ ಒಡಂಬಡಿಕೆ ಅವಧಿಯು ಮುಕ್ತಾಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೇ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನಿಜವೆ; | G.S.R. 725 (B) ಗೆಜೆಟ್ ನೋಟಿಫಿಕೇಷನ್ ಕ್ಲಾಸ್ 2(b) ರ ದಿನಾಂಕ: 06.10.2023 ರನ್ವಯ, ರಿಯಾಯಿತಿ ಒಪ್ಪಂದದ ಪ್ರಕಾರ ಸೂಚಿಸಲಾದ ಶುಲ್ಕವನ್ನು ರಿಯಾಯಿತಿ ಅವಧಿಯು ಅಂತ್ಯದವರೆಗೆ ವಿಧಿಸಲಾಗುವುದು & ರಿಯಾಯಿತಿ ಅವಧಿಯು ಮುಗಿದ ನಂತರ, ಉಪ ನಿಯಮ (2) ರಲ್ಲಿ ನಿರ್ದಿಷ್ಟಪಡಿಸಿದ ಶುಲ್ಕದ ಪ್ರಕಾರ ಶುಲ್ಕವನ್ನು ಕಾರ್ಯಗತಗೊಳಿಸುವ ಪ್ರಾಧಿಕಾರದ ಕೇಂದ್ರ ಸರ್ಕಾರವು ಸಂಗ್ರಹಿಸುತ್ತದೆ. |
| ಈ) | ಹಾಗಾದಲ್ಲಿ, ಸರ್ಕಾರವು ಈ ಸಂಬಂಧ ಇಲ್ಲಿಯವರೆಗೆ ನಡೆಸಿರುವ ಪತ್ರ ವ್ಯವಹಾರಗಳ ಯಥಾ ಪ್ರತಿಗಳನ್ನು ನೀಡುವುದು; | |
| ಉ) | ಒಡಂಬಡಿಕೆ ಅವಧಿ ಮುಗಿದಿದ್ದರೂ ನ್ಯಾಯಾಲಯದ ತಡೆಯಾಜ್ಞೆ | ಬೆಂಗಳೂರು – ನೆಲಮಂಗಲ ವಿಭಾಗದ ಕಿ.ಮೀ. 10.00 ರಿಂದ 29.50 ರವರೆಗೆ ರಸ್ತೆಯ ಒಡಂಬಡಿಕೆ ಅವಧಿಯು |

| | | |
|---|---|---|
| | ಆದೇಶವಿಲ್ಲದಿದ್ದರೂ, ಸಂಸ್ಥೆಗೆ ಶುಲ್ಕ ಸಂಗ್ರಹಣೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಕಾರಣಗಳೇನು; | ಮುಗಿದಿರುವುದಿಲ್ಲ. ರಿಯಾಯಿತಿದಾರರ ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿದಾರರು ಹೆದ್ದಾರಿಯನ್ನು ಕರಾರಿನನ್ವಯ ನಿರ್ವಹಿಸದ ಕಾರಣ ರಿಯಾಯಿತಿ ಗುತ್ತಿಗೆ ಕರಾರನ್ನು ದಿನಾಂಕ: 21.02.2021 ರಂದು ರದ್ದುಗೊಳಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ದಿನಾಂಕ:21.02.2021ರಂದು ಯೋಜನೆಯನ್ನು ಸುಪರ್ಧಿಗೆ ತೆಗೆದುಕೊಂಡು, ಪ್ರಸ್ತುತ ಮೆ: ಉದಯ ಶಿವಕುಮಾರ್ ಕನ್ಸಟ್ರಕ್ಷನ್ಸ್ ರವರ ಮುಖಾಂತರ ಟೋಲ್ ಫೀ ಶುಲ್ಕವನ್ನು ಸಂಗ್ರಹಿಸಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.<br><br>ನೆಲಮಂಗಲ-ತುಮಕೂರು ವಿಭಾಗಕ್ಕೆ ದಿನಾಂಕ:06.11.2022 ರವರೆಗೆ ಬಳಕೆ ಶುಲ್ಕದ ಸಂಗ್ರಹವನ್ನು M/s. JAS Tollway Pvt. Ltd ರವರು ಸಂಗ್ರಹಿಸಿರುತ್ತಾರೆ.<br><br>ಮುಂದುವರೆದು, ಆರ್ಬಿಟ್ರೇಟರ್ ರವರ ವಿಸ್ತರಣೆಯ ವರದಿಯಂತೆ ಚೊಕ್ಕೇನಹಳ್ಳಿ ಮತ್ತು ಕುಲುಮೆಪಾಳ್ಯ ಟೋಲ್ ಪ್ಲಾಜಾಗಳನ್ನು ದಿನಾಂಕ:07.11.2022 ರಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಶಕ್ಕೆ ಪಡೆದಿದ್ದು, ಪ್ರಸ್ತುತ ಟೋಲ್ ಸಂಗ್ರಹ ಏಜೆನ್ಸಿಯವರಾದ ಮೆ: ಪಾಥ್ ಸಂಸ್ಥೆಯ ರವರ ಮುಖಾಂತರ ಟೋಲ್ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಊ) | ಒಂದು ದಿನಕ್ಕೆ ಸರಾಸರಿ ನೆಲಮಂಗಲ ಟೋಲ್ ಮತ್ತು ಕ್ಯಾತಸಂದ್ರ ಟೋಲ್‌ನಲ್ಲಿ ಶುಲ್ಕ ಸಂಗ್ರಹವಾಗುತ್ತದೆ; ಈ ಹಣವನ್ನು ಯಾವ ಖಾತೆಯಲ್ಲಿ ಇಡಲಾಗಿದೆ; ಇದಕ್ಕೆ ಜವಾಬ್ದಾರರು ಯಾರು; ವಿವರವಾದ ಮಾಹಿತಿ ನೀಡುವುದು? | • ಬೆಂಗಳೂರು-ನೆಲಮಂಗಲ ಮಾರ್ಗದ ಪ್ರತಿ ಟೋಲ್ ಸಂಗ್ರಹಣೆ ದಿನದ ಟೋಲ್ ಸಂಗ್ರಹಣೆ ರೂ.29.91 ಲಕ್ಷ ಪ್ರತಿ ದಿನಕ್ಕೆ.<br>• ನೆಲಮಂಗಲ - ತುಮಕೂರಿನ ಟೋಲ್ ಸಂಗ್ರಹಣೆ ರೂ.18.00 ಲಕ್ಷ ಪ್ರತಿ ದಿನಕ್ಕೆ |

ಕಡತ ಸಂಖ್ಯೆ: ಲೋಇ 53 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು